Stone revetment to Naganayakanapalya Tank.

*Q.—15. Sri K. LAKKAPPA (Hebbur).—

Will the Government be pleased to state:—

(*a*) the number of petitions given by the ryots of Shambhonahalli, Naganayakanapalya in Tumkur Taluk, to the Assistant Engineer, Executive Engineer, Tumkur and the Superintending Engineer, Bangalore Circle and to the Goveenment during the past three years praying for construction of stone revetment to Naganayakanapalya Tank (No. 248) of Tumkur Taluk;

(*b*) what is the action taken by the concerned officers on those petitions and if no action has been taken, the reasons therefor;

(*c*) whether any estimate is prepared for the said work and if so, what is the estimated cost and when the estimates was prepared;

(*d*) whether the ryots have executed any Muchalika towards the contribution amount and if so, the reasons for inordinate dealy in sanctioning the said work?

A.—Sri ALUR HANUMANTHAPPA (Deputy Minister for Minor Irrigation).—

(*a*) To Assistant Engineer	...	...	1
To Executive Engineer	...	...	2
To Superinteding Engineer and above.		...	Nil.

(*b*) Does not arise in view of reply to clause (*c*).

(*c*) Yes, for Rs. 11,500 under scrutiny in the Department.

(*d*) Yes, on 22nd September 1965. Action to get the estimate sanctioned is being taken.

ಶ್ರೀ ಕೆ. ಲಕ್ಕಪ್ಪ.—ಯಾವ ಯಾವ ತಾರೀಖಿನಲ್ಲಿ ಎಷ್ಟು ಅರ್ಜಿಗಳನ್ನು ಕೊಟ್ಟಿದ್ದಾರೆ?

† ಶ್ರೀ ಆಲೂರು ಹನುಮಂತಪ್ಪ.—ಆ ವಿವರ ನನ್ನ ಬಳಿ ಇಲ್ಲ. ಈ ಕೆರೆ 1962ರಲ್ಲಿ ಜೀರ್ಣೋದ್ಧಾರವಾಗಿದೆ, ಅದಕ್ಕೆ 8,200 ರೂಪಾಯಿ ಖರ್ಚಾಗಿದೆ. ರಿವೆಟ್‌ಮೆಂಟ್ ಕಟ್ಟಿಸುವುದಕ್ಕೆ 11,500 ರೂಪಾಯಿಗಳಿಗೆ ಅಂದಾಜಾಗಿದೆ.

ಶ್ರೀ ಕೆ. ಲಕ್ಕಪ್ಪ.—ಈ ಕೆರೆಗೆ ಎಷ್ಟು ವರ್ಷದಿಂದ ರಿವೆಟ್‌ಮೆಂಟಿಲ್ಲ?

ಶ್ರೀ ಆಲೂರು ಹನುಮಂತಪ್ಪ.—ಹಿಂದೆ ರಿವೆಟ್‌ಮೆಂಟ್ ಕಟ್ಟುವ ಪರಿಸ್ಥಿತಿ ಇರಲಿಲ್ಲ, ಈಗ ಕಟ್ಟದರೆ ಒಳ್ಳೆಯದೆಂಬ ಭಾವನೆ ಇದೆ, ಅದಕ್ಕೆ ತಕ್ಕ ಕ್ರಮ ಕೈಕೊಳ್ಳಲಾಗಿದೆ.

ಶ್ರೀ ಕೆ. ಲಕ್ಕಪ್ಪ.—1962ನೆಯ ಇಸವಿಯಿಂದ ಮತ್ತು ಅದಕ್ಕೆ ಮೊದಲಿನಿಂದ ಬೇಕಾದಷ್ಟು ಅರ್ಜಿಗಳನ್ನು ಕೊಟ್ಟರೂ ಕೂಡ ನೂಕ್ಕ ಕ್ರಮ ಕೈಕೊಳ್ಳದಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕೆ ತಕ್ಕ ಗಮನ ಕೊಟ್ಟು ಅದಷ್ಟು ಬೇಗ ಕೆಲಸ ಮಾಡಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಆ ಹೋಬಳಿಯಲ್ಲಿರುವ ಸೂಪರ್‌ವೈಜರು ಆ ಕೆಲಸವನ್ನು ನಂಬಿಂಥಪಟ್ಟ ತಾಲ್ಲೂಕುಬೋರ್ಡ್ ಸದಸ್ಯರಿಗೆ ಕೊಡಬೇಕೆಂದು ನಿಧಾನ ಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ ? ಅದನ್ನು ವಿಚಾರಿಸಿ ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ನಮ್ಮ ಗಮನಕ್ಕೆ ಬಂದಿಲ್ಲ, ಅದಕ್ಕೆ ಮೇಲ್ಪಟ್ಟ ಅಧಿಕಾರಿಗಳಾದ ಅಸಿಸ್ಟೆಂಟ್ ಎಂಜಿನಿಯರು, ಎಗ್ಸಿಕ್ಯುಟಿವ್ ಎಂಜಿನಿಯರು ಅದಕ್ಕೆಲ್ಲ ಅವಕಾಶ ಕೊಡುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಇದರ ಅಂದಾಜು ಮುಂಜೂರಾಗಿವೆಯೆ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ, ಆಗುವುದರಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಬೇಗ ಮುಂಜೂರು ಮಾಡಿ ಕೆಲಸವನ್ನು ಪ್ರಾರಂಭಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

———

Financial aid to Housing Schemes.

*Q.—27. Sri K. P. GADAG (Gadag).—

Will the Government be pleased to state :—

(*a*) the procedure followed by the Housing Board for providing financial aid to the Low Income Group, Middle Class Group and Industrial Labourers Group Housing Schemes ;

(*b*) the number of houses under each head of Low Income Group, Middle Class Group and Industrial Labourers Group that have been constructed by the Housing Board in the State during the last three years and the places where these houses have been constructed ?

A.—Sri K. PUTTASWAMY (Minister for Co-operation and Housing).—

(*a*) *Vide* statement laid on the Table of the House.‡

(*b*) *Vide* statement appended.

‡ Copy placed in the Mysore Legislature Secretariat Library No 1, L.A. dated 29th January 1966.